ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	: 607
ಸದಸ್ಯರ ಹೆಸರು	: ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ	: 16.09.2021
ಉತ್ತರಿಸುವ ಸಚಿವರು	: ಜಲಸಂಪನ್ಮೂಲ ಸಚಿವರು

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಆ</td><td>ಕೃಷ್ಣಾ ಮೇಲ್ದಂಡೆ ಯೋಜನೆಯ 3ನೇ ಹಂತದ ಅನುಷ್ಠಾನಕ್ಕಾಗಿ ಅವಶ್ಯವಿರುವ ಭೂ-ಪ್ರದೇಶದ ವಿಸ್ತೀರ್ಣವೆಷ್ಟು;</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಅನುಷ್ಠಾನಕ್ಕಾಗಿ ಭೂಸ್ವಾಧೀನತೆಗೆ ಒಳಪಡುವ ಜಮೀನುಗಳ ವಿವರ ಈ ಕೆಳಗಿನಂತಿದೆ:
<table>
<tr><th>ಕ್ರ ಸಂ</th><th>ವಿವರ</th><th>ಒಟ್ಟು (ಎಕರೆ)</th></tr>
<tr><td>1</td><td>ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ 188 ಗ್ರಾಮಗಳಿಗೆ ಸಂಬಂಧಿಸಿದಂತೆ ಮುಳುಗಡೆ ಆಗುವ ಜಮೀನು</td><td>75,563</td></tr>
<tr><td>2</td><td>ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ 20 ಗ್ರಾಮಗಳು ಮತ್ತು ಬಾಗಲಕೋಟೆ ಪಟ್ಟಣದ ಪುನರ್ವಸತಿಗಾಗಿ</td><td>6,467</td></tr>
<tr><td>3</td><td>ಯೋಜನೆಯಡಿಯ 9 ಉಪ ಯೋಜನೆಗಳ ನಿರ್ಮಾಣಕ್ಕಾಗಿ</td><td>51,837</td></tr>
<tr><td></td><td>ಒಟ್ಟು</td><td>1,33,867</td></tr>
</table></td></tr>
<tr><td>ಆ</td><td>ಅದಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಭೂಸ್ವಾಧೀನಪಡಿಸಿ ಕೊಳ್ಳಲಾಗಿದೆ;</td><td>ಮೇಲ್ಕಂಡಂತೆ ಒಟ್ಟು 1,33,867 ಎಕರೆ ಕ್ಷೇತ್ರ ಪೈಕಿ ಇದುವರೆಗೂ ಒಟ್ಟು 23,592 ಎಕರೆ ಜಮೀನು ಭೂಸ್ವಾಧೀನತೆಗೆ ಅವಾರ್ಡ್ ಮಾಡಲಾಗಿದೆ.</td></tr>
<tr><td>ಇ)</td><td>ಭೂ-ಸ್ವಾಧೀನಕ್ಕೊಳಗಾದ ಎಲ್ಲಾ ಸಂತ್ರಸ್ಥರಿಗೆ ಪರಿಹಾರ ಒದಗಿಸಲಾಗಿದೆಯೇ;</td><td rowspan="2">ಭೂಸ್ವಾಧೀನಪಡಿಸಿಕೊಂಡ ಜಮೀನು ಮಾಲೀಕರಿಗೆ ಭೂ ಪರಿಹಾರ ವಿತರಿಸಲಾಗಿರುತ್ತದೆ ಹಾಗೂ ಏನಾದರೂ ಮಾಲೀಕತ್ವದ ಕುರಿತು ಕಾನೂನು ತೊಡಕುಗಳು ಇದ್ದ ಪಕ್ಷದಲ್ಲಿ ನಿಯಮಾನುಸಾರ ಪರಿಶೀಲಿಸಿ ಪರಿಹಾರ ವಿತರಣೆಗೆ ಕ್ರಮ ಕೈಕೊಳ್ಳಲಾಗುತ್ತಿದೆ.

ಇಲ್ಲಿಯವರೆಗೆ ರೂ.2127.79 ಕೋಟಿ ಪರಿಹಾದ ಮೊತ್ತ ನೀಡಲಾಗಿದ್ದು, ಸಂತ್ರಸ್ಥರಿಗೆ ರೂ.78.70 ಕೋಟಿ ಪರಿಹಾರ ವಿತರಿಸಬೇಕಾಗಿದೆ.</td></tr>
<tr><td>ಈ)</td><td>ಇಲ್ಲಿಯವರೆಗೆ ಸಂತ್ರಸ್ಥರಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು ಹಾಗೂ ಸಂತ್ರಸ್ಥರಿಗೆ ಇನ್ನೂ ನೀಡಬೇಕಾಗಿರುವ ಪರಿಹಾರದ ಬಾಕಿ ಮೊತ್ತವೆಷ್ಟು;</td></tr>
<tr><td>ಉ)</td><td>ಇನ್ನುಳಿದ ಸಂತ್ರಸ್ಥರಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ಒದಗಿಸಲಾಗುವುದು?</td><td>ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಲ್ಲಿ ಮುಳುಗಡೆಯಾಗುವ ಇನ್ನುಳಿದ ಜಮೀನು ಕ್ಷೇತ್ರವು ಭೂಸ್ವಾಧೀನದ ವಿವಿಧ ಹಂತದಲ್ಲಿರುತ್ತದೆ ಹಾಗೂ ಹಂತ ಹಂತವಾಗಿ ಭೂಸ್ವಾಧೀನ ಪಡಿಸಿಕೊಂಡು ಭೂ ಪರಿಹಾರ ಒದಗಿಸಲು ಕ್ರಮ ಜರುಗಿಸಲಾಗುವುದು.</td></tr>
</table>

ಸಂಖ್ಯೆ:ಜಸಂಇ 86 ಡಬ್ಲ್ಯೂಬಿಎಂ 2021

(ಗೋವಿಂದ ಎಂ.ಕಾರಜೋಳ)
ಜಲ ಸಂಪನ್ಮೂಲ ಸಚಿವರು